# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103**

ಸಂಖ್ಯೆ: ತುವಿ: ಡಿಇವಿ-02:2025-26/4024 ದಿನಾಂಕ:27.03.2026

**ಸುತ್ತೋಲೆ**

ವಿಷಯ: ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:27.03.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಜಿಲ್ಲಾ ಪಂಚಾಯಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸಿದ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾದ ಮಾನ್ಯ ಶ್ರೀ ಪ್ರಭು ಜಿ., (I.A.S) ರವರ ಅಭಿನಂದನಾ ಕಾರ್ಯಕ್ರಮವನ್ನು ತುಮಕೂರು ನಾಗರೀಕರ ಹಾಗೂ ಹಾಲಪ್ಪ ಪ್ರತಿಷ್ಠಾನದ ವತಿಯಿಂದ **ದಿನಾಂಕ:04.04.2026 ಶನಿವಾರ ಲೈಬ್ರರಿ ಸಭಾಂಗಣದಲ್ಲಿ** ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮದ ಅಂಗವಾಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂತಿಮ ವರ್ಷದ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯ ಪಥ ಯುವ ಸಬಲೀಕರಣದ ಉದ್ದೇಶದಿಂದ **ಅಧಿಕಾರಿಗಳೊಂದಿಗೆ ಸಂವಾದ ಕಾರ್ಯಾಗಾರವನ್ನು** ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರತಿ ಕಾಲೇಜಿನಿಂದ ಆಯ್ಕೆ ಮಾಡಿದ 2 ವಿದ್ಯಾರ್ಥಿಗಳಿಗೆ ಸತ್ಕಾರ ಮಾಡಲಾಗುವುದು ಜೊತೆಗೆ ಬಹುಮಾನ ಹಾಗೂ ಪ್ರಮಾಣಪತ್ರವನ್ನು ನೀಡಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಈ ಸಂಬಂಧ ಮೇಲ್ಕಂಡ ಪತ್ರವನ್ನು ಲಗತ್ತಿಸಿದ್ದು, **ದಿನಾಂಕ:04.04.2026 ಶನಿವಾರ ಲೈಬ್ರರಿ ಸಭಾಂಗಣದಲ್ಲಿ** ಆಯೋಜಿಸಿರುವ ಸಂವಾದ ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂತಿಮ ವರ್ಷದ ವ್ಯಾಸಂಗ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳು ಭಾಗವಹಿಸಿ ಇದರ ಸದುಪಯೋಗಪಡಿಸಿಕೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ / ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಇಮೇಲ್ ಮುಖಾಂತರ ಸಂಬಂಧಪಟ್ಟವರಿಗೆ ಕಳುಹಿಸಲು ಕ್ರಮವಹಿಸುವುದು.
2. ಮುರುಳೀಧರ ಹಾಳಪ್ಪ, ಅಧ್ಯಕ್ಷರು, ಹಾಲಪ್ಪ ಪ್ರತಿಷ್ಠಾನ, ಜಯನಗರ, ತುಮಕೂರು
3. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಚೇರಿ ಪ್ರತಿ.

ಮುರಳೀಧರ ಹಾಲಪ್ಪ
ಅಧ್ಯಕ್ಷರು

# ಹಾಲಪ್ಪ ಪ್ರತಿಷ್ಠಾನ

ರವರಿಗೆ
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಮಾನ್ಯರೇ,

ವಿಷಯ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸಿದ ದಕ್ಷಾಧಿಕಾರಿ **ಮಾನ್ಯ ಶ್ರೀ ಪ್ರಭು G (I.A.S)** ರವರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು.

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಜಿಲ್ಲಾ ಪಂಚಾಯಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸಿದ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾದ **ಮಾನ್ಯ ಶ್ರೀ ಪ್ರಭು G (I.A.S)** ರವರ ಅಭಿನಂದನಾ ಕಾರ್ಯಕ್ರಮವನ್ನು ತುಮಕೂರು ನಾಗರೀಕರ ವೇದಿಕೆ ಹಾಗೂ ಹಾಲಪ್ಪ ಪ್ರತಿಷ್ಠಾನದ ವತಿಯಿಂದ **ದಿನಾಂಕ 04 ಏಪ್ರಿಲ್ 2026, ಶನಿವಾರ, ಸ್ಥಳ: ಲೈಬ್ರರಿ ಸಭಾಂಗಣದಲ್ಲಿ** ಆಯೋಜಿಸಲಾಗಿದೆ.

ಸದರಿ ಕಾರ್ಯಕ್ರಮದ ಅಂಗವಾಗಿ, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂತಿಮ ವರ್ಷದ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **ಕೌಶಲ್ಯ ಪಥ ಯುವ ಸಬಲೀಕರಣದ ಉದ್ದೇಶದಿಂದ** ಅಧಿಕಾರಿಗಳೊಂದಿಗೆ ಸಂವಾದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಪ್ರತಿ ಕಾಲೇಜಿನಿಂದ ಆಯ್ಕೆ ಮಾಡಿದ 2 ವಿದ್ಯಾರ್ಥಿಗಳಿಗೆ ಸತ್ಕಾರ ಮಾಡಲಾಗುವುದು. ಜೊತೆಗೆ , ನಗದು ಬಹುಮಾನ ಹಾಗೂ ಪ್ರಮಾಣಪತ್ರವನ್ನು ನೀಡಲಾಗುತ್ತದೆ.

ಆದುದರಿಂದ, ಈ ಕಾರ್ಯಗಾರದಲ್ಲಿ ಭಾಗವಹಿಸಲು ಎಲ್ಲಾ ಕಾಲೇಜುಗಳಿಗೆ ಅಗತ್ಯ ಸೂಚನೆಗಳನ್ನು ನೀಡುವಂತೆ ವಿನಂತಿಸುತ್ತೇವೆ.

ವಂದನೆಗಳೊಂದಿಗೆ,

**ಇಂತಿ**

ತುಮಕೂರು ವಿಶ್ವವಿದ್ಯಾನಿಲಯ
ಸಂಖ್ಯೆ 580
ದಿನಾಂಕ 24/3/26
ತುಮಕೂರು

25/3/26

**ಮುರಳೀಧರ ಹಾಲಪ್ಪ**
**ಅಧ್ಯಕ್ಷರು**

#59, 3rd Cross, 5th main, Jayanagara East, Tumkur - 572102 ,
E-mail-halappaa@gmail.com Contact-6366273089

# ತುಮಕೂರು ನಾಗರೀಕರ ವೇದಿಕೆ

ಮತ್ತು

# ಹಾಲಪ್ಪ ಪ್ರತಿಷ್ಠಾನ ವತಿಯಿಂದ

# ಅಭಿನಂದನಾ ಸಮಾರಂಭ

## ಹಾಗೂ ಸಂವಾದ ಕಾರ್ಯಕ್ರಮ



ಮುಖ್ಯ ಅತಿಥಿಗಳು:

**ಮಾನ್ಯ ಶ್ರೀ G. ಪ್ರಭು I.A.S**

ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ
( ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜಿಲ್ಲಾ ಪಂಚಾಯತ್, ತುಮಕೂರು )

## ಕೌಶಲ್ಯ ಪಥ - ಯುವ ಸಬಲೀಕರಣ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ



ದಿನಾಂಕ: 04 ಏಪ್ರಿಲ್ 2026, ಶನಿವಾರ

ಸಮಯ: ಮದ್ಯಾಹ್ನ 3ಗಂಟೆಗೆ

ಸ್ಥಳ: ಲೈಬ್ರರಿ ಸಭಾಂಗಣ, ತುಮಕೂರು

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:- 6366273089

**ವಿಶೇಷ ಸೂಚನೆ :**

ಪ್ರತಿ ಕಾಲೇಜಿನ ಅರ್ಹ ವಿದ್ಯಾರ್ಥಿಗಳ ಆಯ್ಕೆ, ಸತ್ಕಾರ, ಬಹುಮಾನ ಹಾಗೂ ಪ್ರಮಾಣಪತ್ರ ವಿತರಣೆ.

**ಸೂಚನೆ:**

ಸಂಬಂಧಿಸಿದ ಎಲ್ಲಾ ಕಾಲೇಜುಗಳು ತಮ್ಮ ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಭಾಗವಹಿಸಲು ಪ್ರೋತ್ಸಾಹಿಸುವಂತೆ ವಿನಂತಿ.